# ಡ್ರ್ಯಾಪ್ ಕುರ್ತಾ ಟ್ರೆಂಡ್

**ಫ್ಯಾಷನ್ ವಿಚಾರಕ್ಕೆ ಬಂದಾಗ ಮಹಿಳೆಯರಿಗೆ ಇರುವಷ್ಟು ಆಯ್ಕೆ ಪುರುಷರ ಉಡುಪುಗಳಿಗಿಲ್ಲ. ಆದರೆ ಇದೀಗ ಮದುವೆ, ಪಾರ್ಟಿ ಮುಂತಾದ ವಿಶೇಷ ಸಂದರ್ಭಗಳಿಗಾಗಿ ಪುರುಷರ ಡ್ರ್ಯಾಪ್ ಕುರ್ತಾ ಜನಪ್ರಿಯವಾಗುತ್ತಿದೆ. ನೋಡಲು ಆಕರ್ಷಕವಾಗಿರುವ ಈ ವಿನೂತನ ವಿನ್ಯಾಸದ ಕುರ್ತಾ ಪುರುಷರ ಫ್ಯಾಷನ್ ಟ್ರೆಂಡ್ ಕೂಡ ಆಗಿದೆ.**

**■ ಪವಿತ್ರಾ ರಾಘವೇಂದ್ರ ಶೆಟ್ಟಿ**



ಫ್ಯಾಷನ್ ಜಗತ್ತಿನಲ್ಲಿ ದಿನಕ್ಕೊಂದು ವಿನ್ಯಾಸದ ಉಡುಗೆಗಳು ಬರುತ್ತಿರುತ್ತವೆ. ಇವತ್ತು ಟ್ರೆಂಡ್‌ನಲ್ಲಿರುವುದು ನಾಳೆ ಇರುವುದಿಲ್ಲ. ಜನ ಕೂಡ ಒಂದೇ ಬಗೆಯ ಡ್ರೆಸ್‌ಗಿಂತ ವಿಭಿನ್ನ ವಿನ್ಯಾಸದ ಉಡುಗೆ ತೊಡಲು ಇಷ್ಟಪಡುತ್ತಾರೆ. ಹುಡುಗಿಯರಿಗಾದರೆ ಸಾಕಷ್ಟು ವಿನ್ಯಾಸದ ಉಡುಪುಗಳು ಇರುತ್ತವೆ. ಜೀನ್ಸ್‌ನಿಂದ ಹಿಡಿದು ಸೀರೆಯ ತನಕ ವೈವಿಧ್ಯಮಯ ವಿನ್ಯಾಸದ ದಿರಿಸಿನಲ್ಲಿ ಹುಡುಗಿಯರು ಮಿಂಚುತ್ತಾರೆ. ಆದರೆ ಹುಡುಗರ ವಿಷಯಕ್ಕೆ ಬಂದಾಗ ಮಾತ್ರ ಪುರುಷರಿಗೆ ಉಡುಪಿನ ಆಯ್ಕೆ ಸೀಮಿತ ಅಷ್ಟೆ.

ಪ್ಯಾಂಟ್, ಟೀ ಶರ್ಟ್, ಸೂಟ್, ಶೆರ್ವಾನಿ, ಕುರ್ತಾ ಇವೇ ಮೊದಲಾದವು ಇರುತ್ತಿದ್ದವು. ಆದರೆ ಈಗ ಹುಡುಗರ ದಿರಿಸಿನಲ್ಲಿಯೂ ಬದಲಾವಣೆಯ ಗಾಳಿ ಬೀಸಿದೆ. ಹುಡುಗಿಯರಿಗಿಂತ ನಾವೇನೂ ಕಮ್ಮಿ ಇಲ್ಲ ಎಂದು ತುಸು ವೈವಿಧ್ಯಮಯ ವಿನ್ಯಾಸದ ಉಡುಪುಗಳಲ್ಲಿ ಹುಡುಗರೂ ಮಿಂಚುತ್ತಿದ್ದಾರೆ.

ಈಗ ಕೌಲ್ ಅಥವಾ ಡ್ರ್ಯಾಪ್ ಕುರ್ತಾ ಟ್ರೆಂಡ್‌ನಲ್ಲಿದೆ. ಈಗಾಗಲೇ ಓಪನ್ ಕಾಲರ್ ಕುರ್ತಾ, ಡಿಸೈನರ್ ಕುರ್ತಾ, ಎಂಬ್ರಾಯಿಡರಿ ನೆಕ್ ಕುರ್ತಾ, ಅಂಗಾರಕ ಕುರ್ತಾ, ಬ್ಲಾಕ್ ಪ್ರಿಂಟೆಡ್ ಕುರ್ತಾ, ಪಟಾಣಿ ಕುರ್ತಾಗಳು ಮುಂಚೂಣಿಯಲ್ಲಿವೆ. ಇದರ ಜತೆಗೆ ಈ ಡ್ರ್ಯಾಪ್ ಕುರ್ತಾ ಕೂಡ ಹುಡುಗರ ಕುರ್ತಾ ಪಟ್ಟಿಯಲ್ಲಿ ಸೇರಿದೆ. ಈಗಾಗಲೇ ಹುಡುಗಿಯರ ಡ್ರ್ಯಾಪ್ ಕುರ್ತಾಗಳು ಮಾರುಕಟ್ಟೆಯಲ್ಲಿದೆ. ಈಗ ಹುಡುಗರ ಕುರ್ತಾ ಕೂಡ ಡಿಫರೆಂಟ್ ಲುಕ್‌ನಲ್ಲಿ ಕಾಣಿಸಿಕೊಂಡಿದೆ.

## ಡ್ರ್ಯಾಪ್ ಕುರ್ತಾದ ವಿಶೇಷತೆ ಏನು?

ಈ ಡ್ರ್ಯಾಪ್ ಅಥವಾ ಕೌಲ್ ಕುರ್ತಾ ಒಂದು ರೀತಿ ಡಿಸೈನರ್ ಕುರ್ತಾ ಆಗಿದೆ. ಸ್ವಲ್ಪಮಟ್ಟಿಗೆ ಅಂಗಾರಕ ಕುರ್ತಾ ಡಿಸೈನ್ ಅನ್ನು ಇದು ಹೋಲುತ್ತದೆ. ಕುರ್ತಾದ ಕೆಳಗಡೆಯಿಂದ ಅಥವಾ ಮೇಲಿನಿಂದ ಇದರ ಡ್ರೆಪರಿ ಇರುತ್ತದೆ. ಕುತ್ತಿಗೆ, ಭುಜ ಅಥವಾ ಕುರ್ತಾದ ಯಾವುದೇ ಭಾಗದ ಬಳಿ ಪಿನ್ ಟಕ್ಸ್ ಹೊಲಿಗೆ ಬಂದಿರುತ್ತದೆ. ಹಾಗೇ ಈ ಕುರ್ತಾದಲ್ಲಿ ಹೈ ಕಾಲರ್ ಕೂಡ ಇರುತ್ತದೆ. ಕುರ್ತಾದ ಮೇಲೆ ಪ್ಲೇಟೆಡ್ ಮಾದರಿಯ ಡ್ರಾಪ್‌ಗಳು ಇರುವುದರಿಂದ ಈ ಡ್ರೆಸ್ ನೋಡುವುದಕ್ಕೆ ತುಂಬಾ ಸುಂದರವಾಗಿರುತ್ತದೆ. ಹಾಗೇ ಧರಿಸುವವರಿಗೆ ಒಂದು ಡಿಫರೆಂಟ್ ಲುಕ್ ನೀಡುತ್ತದೆ. ಮತ್ತೆ ಇದನ್ನು ಯಾವುದೇ ಸಮಾರಂಭಕ್ಕೆ ಕೂಡ ಧರಿಸಬಹುದು. ಧರಿಸುವುದಕ್ಕೆ ಅಷ್ಟೇನೂ ತೊಂದರೆ ಇಲ್ಲ. ಆರಾಮದಾಯಕವಾಗಿರುತ್ತದೆ. ಶೆರ್ವಾನಿ, ಇಂಡೋ ವೆಸ್ಟರ್ನ್ ಮತ್ತು ಬಂಧಲಾಗಳಲ್ಲಿ ಸಹ ಈ ಡ್ರ್ಯಾಪ್ ಬಳಸಿ ತಯಾರಿಸಬಹುದು.

ನೋಡುವುದಕ್ಕೆ ಹಾಗೂ ಧರಿಸುವುದಕ್ಕೆ ಸಿಂಪಲ್ಲಾಗಿ ಕಾಣುವ ಈ ಕುರ್ತಾ ವಿನ್ಯಾಸ ಮಾಡುವುದಕ್ಕೆ ವಿಶೇಷ ಜ್ಞಾನ ಹಾಗೂ ಹೊಲಿಗೆಯ ಅಗತ್ಯವಿದೆ. ಸಾಮಾನ್ಯವಾಗಿ ಕಪ್ಪು, ಬಿಳಿ, ಮಂದ ಬಿಳಿ, ಕೆನೆ ಬಣ್ಣ, ನೀಲಿ, ಆಲಿವ್, ಕಂದು, ತೆಳು ಗುಲಾಬಿ, ಹಳದಿ ಬಣ್ಣಗಳನ್ನು ಡ್ರ್ಯಾಪ್ ಕುರ್ತಾ ತಯಾರಿಸಲು ಬಳಸಲಾಗುತ್ತದೆ.

ಈ ಉಡುಪಿನ ಮತ್ತೊಂದು ವಿಶೇಷತೆಯೆನೆಂದರೆ ಇದನ್ನು ಜೀನ್ಸ್, ಧೋತಿ, ಪ್ಯಾಂಟ್ ಮೇಲೆ ಕೂಡ ಧರಿಸಬಹುದು. ಹಾಗಾಗಿ ಹುಡುಗರು ಈ ಡ್ರೆಸ್ ಖರೀದಿ ಮಾಡಿದರೆ ಸಾಕಷ್ಟು ಪ್ರಯೋಜನ ಕೂಡ ಇದೆ. ಮದುವೆ, ಎಂಗೇಜ್‌ಮೆಂಟ್, ಸಾಂಪ್ರದಾಯಿಕ ಸಮಾರಂಭಗಳಿಗೆ ಇದು ಹೇಳಿ ಮಾಡಿಸಿದ್ದು. ಸ್ಟೈಲಾಗಿ ಕೂಡ ಕಾಣಿಸಿಕೊಳ್ಳಬಹುದು. ಕೆಲವು ಗಂಡಸರಿಗೆ ಡ್ರೆಸ್ ಮಾಡಿಕೊಳ್ಳುವುದಕ್ಕೆ ತುಂಬಾ ಹೊತ್ತು ಕಳೆಯುವುದರೆಂದರೆ ಆಗುವುದಿಲ್ಲ. ಅಂತಹವರಿಗೆ ಈ ಡ್ರೆಸ್ ವರದಾನ ಎನ್ನಬಹುದು. ಇದರಲ್ಲಿ ವಿಭಿನ್ನ ವಿನ್ಯಾಸವಿರುವುದರಿಂದ ನೋಡುವುದಕ್ಕೂ